ಆ) ಧಾರವಾಡ ಜಿಲ್ಲೆಯ ಎಷ್ಟು ತಾಲ್ಲೂಕುಗಳು ಬರಪೀಡಿತಗೊಂಡಿದೆ;

ಇ) ಬರ ಪರಿಹಾರಕ್ಕೆ ಸರ್ಕಾರ ತೆಗೆದುಕೊಂಡು ಕ್ರಮಗಳೇನು;

ಈ) ಬರ ಪರಿಹಾರಕ್ಕಾಗಿ ಕೇಂದ್ರದಿಂದ ಬಿಡುಗಡೆಯಾಗಿರುವ ಆಹಾರಧಾನ್ಯಗಳೆಷ್ಟು ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣವೆಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) :

ಅ) 128 ತಾಲ್ಲುಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ.

ಆ) ಧಾರವಾಡ ಜಿಲ್ಲೆಯಲ್ಲಿ ನವಲಗುಂದ ಮತ್ತು ಕುಂದಗೋಳ ತಾಲ್ಲೂಕುಗಳ ಬರಪೀಡಿತವೆಂದು ಘೋಷಿಸಿದೆ.

ಇ) ರಾಜ್ಯದ ಬರಪೀಡಿತ ತಾಲ್ಲೂಕುಗಳಲ್ಲಿ ಬರ ಪರಿಹಾರ ಕಾರ್ಯ ಕೈಕೊಳ್ಳಲು ರಾಜ್ಯ ಸರ್ಕಾರವು ಒಟ್ಟು ರೂ.277.00 ಕೋಟಿ ಹಣ ಬಿಡುಗಡೆ ಮಾಡಿದೆ ಹಾಗೂ 50,000 ಮೆ.ಟನ್ ಆಹಾರಧಾನ್ಯ ಬಿಡುಗಡೆ ಮಾಡಿದೆ. ಈ ಹಣವನ್ನು ಉದ್ಯೋಗ ಸೃಜಿಸುವಂತಹ ಕಾಮಗಾರಿಗಳಾದ ಸಣ್ಣ ನೀರಾವರಿ ಕೆರೆಗಳ ದುರಸ್ತಿ ಕಾಮಗಾರಿಗಳು, ಜಲ ಸಮೃದ್ಧಿ ಕಾಮಗಾರಿಗಳು, ಚೆಕ್ ಡ್ಯಾಮ್ಸ್, ಕಾಮಗಾರಿಗಳನ್ನು ಕೈಕೊಳ್ಳಲು ಹಾಗೂ ಕುಡಿಯುವ ನೀರು ಒದಗಿಸಲು ಹಾಗೂ ಮೇವು ಖರೀದಿಸಲು ಉಪಯೋಗಿಸಲಾಗುತ್ತಿದೆ. ಅಂತರ ರಾಜ್ಯ ಮೇವು ಸಾಗಾಣಿಕೆಯನ್ನು ನಿರ್ಬಂಧಿಸಲಾಗಿದೆ.

ಈ) ಬರ ಪರಿಹಾರಕ್ಕೆ ಕೇಂದ್ರ ಸರ್ಕಾರದಿಂದ 50 ಮೆ.ಟನ್ ಆಹಾರಧಾನ್ಯ ಬಿಡುಗಡೆಯಾಗಿರುತ್ತದೆ. ರಾಜ್ಯ ಸರ್ಕಾರವು ಬರ ಪರಿಹಾರಕ್ಕೆ ರೂ.277.00 ಕೋಟಿ ಹಣ ಬಿಡುಗಡೆ ಮಾಡಿದೆ.

1308 (1443) ಶ್ರೀ ಅಂಜನಾಮೂರ್ತಿ (ನೆಲಮಂಗಲ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 20 ತಿಂಗಳಿಂದ ಬರ ಪರಿಹಾರದಡಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ;

ಆ) ಯಾವ ಯಾವ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಕೇಂದ್ರ ಸರ್ಕಾರವು ಬರಪರಿಹಾರಕ್ಕೆಂದೇ ಪ್ರತ್ಯೇಕವಾದ ಅನುದಾನ ಬಿಡುಗಡೆ ಮಾಡುವುದಿಲ್ಲ. 2005–06ನೇ ಸಾಲಿನಲ್ಲಿ ಹಾಗೂ 2006–07ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರಕ್ಕೆ ಕೇಂದ್ರ ಸರ್ಕಾರವು ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿದೆ.

(ರೂ.ಕೋಟಿಗಳಲ್ಲಿ)

	2005–06	2006–07
ಸಿಆರ್‌ಎಫ್ ಅಡಿಯಲ್ಲಿ	ರೂ.86.00	113.98
ಎನ್‌ಸಿಸಿಎಫ್ ಅಡಿಯಲ್ಲಿ	ರೂ.358.85	226.30
ಒಟ್ಟು	**ರೂ.444.85**	**340.28**

ತಾಲ್ಲೂಕುವಾರು ಹಣ ಬಿಡುಗಡೆ ಮಾಡುವುದಿಲ್ಲ. ಬರ ಪರಿಹಾರಕ್ಕೆ ಜಿಲ್ಲಾವಾರು ಹಣ ಬಿಡುಗಡೆ ಮಾಡಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಬರ ಪರಿಹಾರಕ್ಕೆ 2005–06 ಮತ್ತು 2006–07 ರಲ್ಲಿ ಬಿಡುಗಡೆ ಮಾಡಿದ ಅನುದಾನ

(ರೂ.ಲಕ್ಷಗಳಲ್ಲಿ)

ಕ್ರಸಂ	ಜಿಲ್ಲೆ	2005–06	2006–07
1.	ಬೆಂಗಳೂರು ನಗರ	85.71	625.00
2.	ಬೆಂಗಳೂರು ಗ್ರಾಮಾಂತರ	49.57	1925.00
3.	ಕೋಲಾರ	365.22	2250.00
4.	ತುಮಕೂರು	168.00	2040.00
5.	ಚಿತ್ರದುರ್ಗ	20.54	1475.00
6.	ದಾವಣಗೆರೆ	20.00	1330.00

7.	ಶಿವಮೊಗ್ಗ	34.45	425.00
8.	ಮೈಸೂರು	20.00	1750.00
9.	ಚಾಮರಾಜನಗರ	16.00	825.00
10.	ಮಂಡ್ಯ	34.30	1450.00
11.	ಚಿಕ್ಕಮಗಳೂರು	77.45	425.00
12.	ಹಾಸನ	110.55	820.00
13.	ಕೊಡಗು	13.80	10.00
14.	ದಕ್ಷಿಣ ಕನ್ನಡ	25.00	10.00
15.	ಉಡುಪಿ		10.00
16.	ಗುಲ್ಬರ್ಗಾ	168.75	2140.00
17.	ಬೀದರ್	15.00	1140.00
18.	ರಾಯಚೂರು	20.00	1125.00
19.	ಕೊಪ್ಪಳ	65.74	830.00
20.	ಬಳ್ಳಾರಿ	20.00	1440.00
21.	ಬೆಳಗಾಂ	183.00	1250.00
22.	ಬಿಜಾಪುರ	20.00	1025.00
23.	ಬಾಗಲಕೋಟೆ	20.00	1225.00
24.	ಧಾರವಾಡ	19.78	460.00
25.	ಗದಗ್	11.39	1040.00
26.	ಹಾವೇರಿ	132.50	625.00
27.	ಉತ್ತರ ಕನ್ನಡ	94.00	30.00
	ಒಟ್ಟು	**1810.75**	**27700.00**